ದಿಃ21.11.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಪಾಟೀ ಸವಾಲುಃ ಆರೋಪಿಗಳ ಪರವಾಗಿ ಶ್ರೀ.ಎನ್.ಆರ್., ವಕೀಲರಿಂದಃ</u>

ದಿಃ 14.09.2020 ರಂದು ನಿಮ್ಮ ಮಗು ಕಾಣೆಯಾಗಿದೆ ಎಂದು ನಿಮಗೆ ದೂರವಾಣಿ ಕರೆ ಬಂದ ನಂತರ ನೀವು ಅದೇ ದಿನ ರಾಮನಗರಕ್ಕೆ ಬಂದಿರಾ ಎಂದರೆ ಸಾಕ್ಷಿ ನನಗೆ  ರಾತ್ರಿ ಯಾವುದೇ ವಿಚಾರ ಗೊತ್ತಾಗಲಿಲ್ಲ, ಬೆಳಿಗ್ಗೆ ವಿಚಾರ ಗೊತ್ತಾಯಿತು, ಗೊತ್ತಾದ ತಕ್ಷಣ ನಾನು ಬಂದಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ರಾಮನಗರಕ್ಕೆ ಬಂದ ನಂತರ ನನ್ನ ಗಂಡನ ಅಣ್ಣನ ಹೆಂಡತಿಯಾದ ಅಲ್ಮಾಸ್ ಬೇಗಂ ಜೊತೆ ಸೇರಿ ಬೆಳಿಗ್ಗೆ ಎಲ್ಲಾ ಕಡೆ ಹುಡುಕಿದೆವು. ಮನೆಯ ಬಳಿ ಇರುವಂತಹ ಅಂಗಡಿಯವರಿಗೆ ನನ್ನ ಗಂಡ ಇಮ್ರಾನ್ ಬೇಗ್ ಮತ್ತು ನನ್ನ ಗಂಡನ ಅಣ್ಣ ತಮ್ಮಂದಿರೆಲ್ಲಾ ಸೇರಿ ಮಗುವನ್ನು ಹುಡುಕುವಾಗ  ಮಗು ಅಂಗಡಿಗೆ ಬಂದಿದೆಯಾ ಎಂದು ವಿಚಾರಿಸಿರುತ್ತಾರೆ. ದಿಃ 15.09.2020 ರಂದು ನಾನು ಪೊಲೀಸರಿಗೆ ಹೇಳಿಕೆ ಕೊಡುವ ಸಮಯದಲ್ಲಿ ಮಗು ಕಾಣೆಯಾದ ಬಗ್ಗೆ ಮಾತ್ರ ಹೇಳಿಕೊಂಡಿದ್ದು ಆರೋಪಿಯ ಬಗ್ಗೆ ಯಾವುದೇ ವಿಚಾರ ಹೇಳಿರುವುದಿಲ್ಲ. ಅರ್ಕಾವತಿ ನದಿಯಲ್ಲಿ ನಿಮ್ಮ ಜನಾಂಗದ ಹುಡುಗರು ಹಾಗೂ ಕೆಲವು ರೈತರು ಮೀನು ಹಿಡಿಯುವ ಕೆಲಸ ಮತ್ತು ಹಸು ಕರುಗಳನ್ನು ತೊಳೆಯುವುದು ಮಾಡುತ್ತಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದ್ಯಾವರಸೇಗೌಡನದೊಡ್ಡಿಯ ಹತ್ತಿರ ಅರ್ಕಾವತಿ ನದಿಯಲ್ಲಿ  ಒಂದು ಮಗುವಿನ ಮೃತ ದೇಹ ಸಿಕ್ಕಿದೆ ಎಂದು ನಿಮಗೆ ಜನರಿಂದ ಗೊತ್ತಾಯಿತು ಎಂದರೆ ಸರಿ. ಆರೋಪಿಗೂ ಈ ಕೃತ್ಯಕ್ಕೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಸಹ ನಾನು ಈ ದಿನ  ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ದೂರು ಕೊಟ್ಟ ನಂತರ ನನ್ನ ಮಗು ದಯಾನ್ ಖಾನ್ ನನ್ನು

ಆರೋಪಿ ಮುಜಾಮಿಲ್ ಪಾಷ ಮೊಟಾರ್ ಸೈಕಲ್ ನಲ್ಲಿ ಕಿಡ್ನಾಪ್ ಮಾಡಿಕೊಂಡು ಹೋಗಿ, ಸಾಯಿಸಿ, ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ, ಬ್ರಿಡ್ಜ್ ನಿಂದ ಕೆಳಕ್ಕೆ ಎಸೆದು ಬಂಡೆ ಕಲ್ಲನ್ನು ಆತನ ಮೇಲೆ ಇರಿಸಲಾಗಿದೆ ಎಂದು ತಿಳಿಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಮ್ಮ ಮಗನನ್ನು ರೇವಣ್ಣನ ತೋಟಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಕೊಲೆ ಮಾಡಲಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಣಕ್ಕಾಗಿ ಈ ರೀತಿ ನಿಮ್ಮ ಮಗುವಿನ ಕೊಲೆ ಮಾಡಲಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನಿಮ್ಮನ್ನು ನಿಮ್ಮ ಮಗನ ಕೊಲೆಗೆ ಸಂಬಂಧಿಸಿದಂತೆ ವಿಚಾರಣೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಯಾವುದೇ ವಿಚಾರವನ್ನು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಮಗುವನ್ನು ಅಪಹರಣ ಮಾಡಿ ಹಣ ವನ್ನು ಪಡೆಯು ಯಾವುದೇ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ಪೋಲೀಸರಿಗೆ ನಾನು ಯಾವುದೇ ಹೇಳಿಕೆಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನಗೆ ಪ್ರಕರಣದ ಬಗ್ಗೆ ಯಾವುದೇ ವಿಚಾರ ತಿಳಿಯದೇ ಇದ್ದರೂ ಸಹ ಇಂದು ಪೋಲೀಸರು ಹೇಳಿ ಕೊಟ್ಟಂತೆ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ವ್ಯಯಕ್ತಿಕವಾಗಿ ಯಾವುದೇ ವಿಚಾರ ತಿಳಿಯದೇ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಪಂಚಾಕ್ಷರಿ.ಎಂ)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
C/c 3ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

ರಾಮನಗರ.